ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಕೈಗಾರಿಕಾ ತರಬೇತಿ ಮತ್ತು ಶಿಶಿಕ್ಷು (ಅಪ್ರೆಂಟಿಸ್‌ಷಿಪ್) ಆಯುಕ್ತಾಲಯದ ಹೆಸರನ್ನು ಮರುನಾಮಕರಣ ಮಾಡುವ ಹಾಗೂ ಅದರ ಪ್ರಕಾರ್ಯಗಳನ್ನು ಪುನರ್ ಸಂಘಟಿಸುವ ಬಗ್ಗೆ.

ಓದಲಾಗಿದೆ:
1. ಸರ್ಕಾರಿ ಆದೇಶ ಸಂ: ಸಿಆಸುಇ 164 ಸಉಸೇ 2016, ದಿನಾಂಕ: 24.09.2016.
2. ಕಡತ ಸಂಖ್ಯೆ:ಕಾಇ 461 ಇಟಿಐ 2016, 17.05.2017.

*******

**ಪ್ರಸ್ತಾವನೆ:**

ಮೇಲೆ (1)ರಲ್ಲಿ ಓದಲಾದ ಸರ್ಕಾರಿ ಆದೇಶದಲ್ಲಿ ರಾಜ್ಯ ಸರ್ಕಾರವು 2016-17ರ ಆರ್ಥಿಕ ವರ್ಷದ ಆಯವ್ಯಯ ಭಾಷಣದಲ್ಲಿ ಘೋಷಿಸಿದಂತೆ ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆಯನ್ನು ಹೊಸದಾಗಿ ಸೃಜಿಸಲಾಗಿದೆ. ರಾಜ್ಯದ ವಿವಿಧ ಇಲಾಖೆಗಳ ಕೌಶಲ್ಯ ಅಭಿವೃದ್ಧಿ ಕಾರ್ಯಕ್ರಮಗಳನ್ನು ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆಯಡಿ ಒಂದೆಡೆ ತರಲಾಗಿದೆ. ಅಲ್ಲದೆ ಎಲ್ಲಾ ಇಲಾಖೆಗಳ ಕೌಶಲ್ಯಾಭಿವೃದ್ಧಿ ಕಾರ್ಯಕ್ರಮಗಳನ್ನು ಮಿಷನ್ ಮೋಡ್ ಮೂಲಕ ಅನುಷ್ಠಾನಗೊಳಿಸಲು ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಚಟುವಟಿಕೆಗಳಿಗೆ ಸಂಬಂಧಿಸಿದ ವಿಷಯಗಳನ್ನೊಳಗೊಂಡ ಸಮಗ್ರ ಕೌಶಲ್ಯ ನೀತಿಯನ್ನು ಮತ್ತು ಮುಂದಿನ ಒಂದು ದಶಕಕ್ಕಾಗಿ ದೂರದೃಷ್ಟಿ ವರದಿಯನ್ನು ಮತ್ತು ಆಯವ್ಯಯದ ಬೇಡಿಕೆಯಂತೆ ಕ್ರಿಯಾ ಯೋಜನೆಯನ್ನು ಹೊರತರುವುದಕ್ಕಾಗಿ ಹೊಸದಾಗಿ ಸೃಜಿಸಿದ ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆಯಡಿ ಕೈಗಾರಿಕಾ ತರಬೇತಿ ಮತ್ತು ಶಿಶಿಕ್ಷು (ಅಪ್ರೆಂಟಿಸ್‌ಷಿಪ್) ಆಯುಕ್ತಾಲಯವನ್ನು ಸೃಜಿಸಿ ಹಾಗೂ ಪ್ರಕಾರ್ಯಗಳನ್ನು ನಿಗದಿಪಡಿಸಿ ಆದೇಶ ಹೊರಡಿಸಿದೆ.

ಸರ್ಕಾರಿ ಆದೇಶ ಸಂಖ್ಯೆ:ಸಿಆಸುಇ 164 ಸಉಸೇ 2016, ದಿನಾಂಕ:24.09.2016ರನ್ವಯ ಸೃಜಿಸಿದ ಕೈಗಾರಿಕಾ ತರಬೇತಿ ಮತ್ತು ಶಿಶಿಕ್ಷು (ಅಪ್ರೆಂಟಿಸ್‌ಷಿಪ್) ಆಯುಕ್ತಾಲಯದ ಹೆಸರನ್ನು ಕೈಗಾರಿಕಾ ತರಬೇತಿ ಮತ್ತು ಉದ್ಯೋಗ ಆಯುಕ್ತಾಲಯ ಎಂದು ಮರುನಾಮಕರಣ ಮಾಡಲು ಹಾಗೂ ಸದರಿ ಆಯುಕ್ತಾಲಯದ ಪ್ರಕಾರ್ಯಗಳನ್ನು ಪರಿಷ್ಕರಿಸಿ ಪುನರ್ ಸಂಘಟಿಸುವ ಬಗ್ಗೆ ಉದ್ದೇಶಿಸಿದ್ದು, ಸದರಿ ಪ್ರಸ್ತಾವನೆಗೆ ಮೇಲೆ ಓದಲಾದ ಕ್ರಮ ಸಂ: (2)ರಲ್ಲಿ ದಿನಾಂಕ:17.05.2017ರಂದು ಸಚಿವ ಸಂಪುಟವು ಅನುಮೋದನೆಯನ್ನು ನೀಡಿದೆ.

ಅದರಂತೆ ಈ ಕೆಳಕಂಡ ಆದೇಶ.

**ಸರ್ಕಾರದ ಆದೇಶ ಸಂಖ್ಯೆ: ಕೌಉಜೀಇ 121 ಕೌಗುಇ 2017, ಬೆಂಗಳೂರು, ದಿನಾಂಕ: 04.01.2018**

ಪ್ರಸ್ತಾವನೆಯಲ್ಲಿ ವಿವರಿಸಿದ ಅಂಶಗಳ ಹಿನ್ನಲೆಯಲ್ಲಿ ಸರ್ಕಾರಿ ಆದೇಶ ಸಂಖ್ಯೆ:ಸಿಆಸುಇ 164 ಸಉಸೇ 2016, ದಿನಾಂಕ:24.09.2016ರನ್ವಯ ಸೃಜಿಸಿದ ಕೈಗಾರಿಕಾ ತರಬೇತಿ ಮತ್ತು ಶಿಶಿಕ್ಷು (ಅಪ್ರೆಂಟಿಸ್‌ಷಿಪ್)

ಆಯುಕ್ತಾಲಯದ ಹೆಸರನ್ನು ಕೈಗಾರಿಕಾ ತರಬೇತಿ ಮತ್ತು ಉದ್ಯೋಗ ಆಯುಕ್ತಾಲಯ ಎಂದು ಮರುನಾಮಕರಣ ಮಾಡಿ ಸದರಿ ಆಯುಕ್ತಾಲಯದ ಪ್ರಕಾರ್ಯಗಳನ್ನು ಪರಿಷ್ಕರಿಸಿ, ಪುನರ್ ಸಂಘಟಿಸಿ ಆದೇಶಿಸಿದೆ.

ಕೈಗಾರಿಕಾ ತರಬೇತಿ ಮತ್ತು ಉದ್ಯೋಗ ಆಯುಕ್ತಾಲಯ ಪ್ರಕಾರ್ಯಗಳು ಈ ಕೆಳಕಂಡಂತಿದೆ.

ಕೈಗಾರಿಕಾ ತರಬೇತಿ ಕೇಂದ್ರಗಳು ಮತ್ತು ಇತರೆ ಕೌಶಲ್ಯ ಅಭಿವೃದ್ಧಿ ಸಂಸ್ಥೆಗಳ ಆಡಳಿತ ಮತ್ತು ನಿರ್ವಹಣೆ, ಕೌಶಲ್ಯ ಸಂಗ್ರಹಣಾ ಕೋಶ, ರಾಜ್ಯ ಕೌಶಲ್ಯ ಮಾಹಿತಿ ಘಟಕ, ಉದ್ಯೋಗ ವಿನಿಮಯ ಕೇಂದ್ರಗಳು ಮತ್ತು ಕೆರಿಯರ್ ಗೈಡೆನ್ಸ್ ಬ್ಯೂರೋ ಮತ್ತು ವಿದೇಶಿ ಉದ್ಯೋಗ ಕೋಶಗಳು ಈ ಸಂಸ್ಥೆಯ ಅಡಿ ನಿರ್ವಹಿಸುವುದು. ಇಲಾಖಾ ಸಿಬ್ಬಂದಿ ವ್ಯವಸ್ಥೆಯೊಂದಿಗೆ ಉದ್ಯೋಗ ಮತ್ತು ತರಬೇತಿ ಆಯುಕ್ತರನ್ನು ಈ ವ್ಯವಸ್ಥೆಯ ಸೃಜನೆಗಾಗಿ ವರ್ಗಾಯಿಸುವುದು.

ಈ ಆದೇಶವನ್ನು ಪ್ರಕರಣದ ಸಂಖ್ಯೆ: ಸಿ/202/2017ರ ದಿ:17.05.2017ರ ಸಚಿವ ಸಂಪುಟದ ಅನುಮೋದನೆಯೊಂದಿಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ.

(ಈರಣ್ಣ)
ಸರ್ಕಾರದ ಅಧೀನ ಕಾರ್ಯದರ್ಶಿ
ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು
ಜೀವನೋಪಾಯ ಇಲಾಖೆ.

"ಪ್ರತಿ"

ಸಂಖ್ಯೆ: ಉತಇ/ತರಬೇತಿ/ಆಡಳಿತ-15/ವಿವ-39/17-18.

ಆಯುಕ್ತಾಲಯ,
ಉದ್ಯೋಗ ಮತ್ತು ತರಬೇತಿ ಇಲಾಖೆ,
ಕೌಶಲ್ಯ ಭವನ, ಡೈರಿ ವೃತ್ತ,
ಬನ್ನೇರುಘಟ್ಟ ರಸ್ತೆ, ಬೆಂಗಳೂರು-29,
ದಿನಾಂಕ: 18-01-2018.

ಸರ್ಕಾರದ ಆದೇಶ ಸಂಖ್ಯೆ: ಕೌಉಜೀಇ 121 ಕೌಗುಇ 2017, ಬೆಂಗಳೂರು ದಿನಾಂಕ: 04-01-2018 ರ ನಡವಳಿ/ಆದೇಶದಂತೆ ಕ್ರಮವಹಿಸಲು ಪ್ರತಿಯನ್ನು ಕಳುಹಿಸಿ ಕೊಡಲಾಗಿದೆ.

18/1/18
ಜಂಟಿ ನಿರ್ದೇಶಕರು ತರಬೇತಿ(ಆಡಳಿತ),
ಉದ್ಯೋಗ ಮತ್ತು ತರಬೇತಿ.

ಗೆ,

1)ಆಯುಕ್ತಾಲಯದ ಅಧಿಕಾರಿಗಳ ಮಾಹಿತಿಗಾಗಿ.
2) ರಾಜ್ಯದಲ್ಲಿರುವ 4 ವಿಭಾಗೀಯ ಕಚೇರಿಗಳಿಗೆ ಮಾಹಿತಿಗಾಗಿ.
3) ರಾಜ್ಯದ ಎಲ್ಲಾ ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆಗಳ ಪ್ರಾಚಾರ್ಯರುಗಳಿಗೆ ಮಾಹಿತಿಗಾಗಿ.
4) ಜಂಟಿ ನಿರ್ದೇಶಕರು (ತ), ಸ್ಟಾರ್ಕ್., ಮಳವಳ್ಳಿ/ಐ.ಟಿ.ಓ.ಟಿ. ದಾವಣಗೆರೆ ಇವರ ಮಾಹಿತಿಗಾಗಿ.
5) ಜಂಟಿ ನಿರ್ದೇಶಕರು (ಉದ್ಯೋಗ) ಉದ್ಯೋಗ ವಿಭಾಗ ಮತ್ತು ಅಧೀನ ಕಚೇರಿಗಳ ಮಾಹಿತಿಗಾಗಿ.
6) ಸಹಾಯಕ ನಿರ್ದೇಶಕರು (ಲೆಕ್ಕಪತ್ರ) ವಿಭಾಗ, ಆಯುಕ್ತಾಲಯ ರವರ ಮಾಹಿತಿಗಾಗಿ.
7) ಆದೇಶ ಕಡತಕ್ಕೆ.